

## ಸಿಗರೇಟು ಬಿಟ್ಟದ್ದು...

ನನಗಾಗ 26 ವರ್ಷ. ಸಹಜವಾಗಿ ಎಲ್ಲ ಯುವಕರಂತೆ ಸಿಗರೇಟು ಸೇದಬೇಕೆಂಬ ಆಸೆ ಮೂಡಿತು. ಒಂದು ದಿನ ಶೂಟಿಂಗ್ ಸ್ಥಳದಲ್ಲಿ ತಿಂಡಿ ತಿಂದ ಮೇಲೆ ಯಾರಿಗೂ ಗೊತ್ತಾಗದಂತೆ ಅಲ್ಲಿಯೇ ಇದ್ದ ಗೂಡಂಗಡಿ ಬಳಿ ಹೋಗಿ ಸಿಗರೇಟು ತಗೊಂಡು ಸೇದತೊಡಗಿದೆ. ಇನ್ನೂ ಶೂಟಿಂಗ್ ಶುರುವಾಗಿರಲಿಲ್ಲ. ಆ ಸಿನಿಮಾದಲ್ಲಿ ಲೀಲಾವತಿ ನಟಿಸುತ್ತಿದ್ದರು. ನನ್ನ ಪಾಡಿಗೆ ನಾನು ಸಿಗರೇಟಿನಲ್ಲಿ ಮುಳುಗಿದ್ದೆ. ಲೀಲಾವತಿ ಅವರು ಬಂದದ್ದು ಗೊತ್ತಾಗಲಿಲ್ಲ. ಬಂದವರೇ 'ನಾಗೇಶ್ ಅವರೇ ಏನು ಮಾಡ್ತಾ ಇದ್ದೀರಿ' ಅಂದ್ರು. ಅವರತ್ತ ತಿರುಗಿ ನೋಡಿದವನೇ ತಕ್ಷಣ ಸಿಗರೇಟಿದ್ದ ಕೈಯನ್ನು ಬೆನ್ನ ಹಿಂದೆ ಮರೆಮಾಚಿ, ತೊದಲತೊಡಗಿದೆ. 'ಅದು ಸಿಗರೇಟು' ಅನ್ನುವಷ್ಟರಲ್ಲಿ ಲೀಲಾವತಿ ಅವರು, 'ನೋಡಿ, ನೀವು ನನಗೆ ತಮ್ಮ ಇದ್ದಂತೆ. ನೀವಿನ್ನೂ ಬಾಳಿ ಬದುಕಬೇಕಾದವರು. ನನಗೋಸ್ಕರ ಸಿಗರೇಟು ಬಿಡಬೇಕು. ನನಗೆ ಪ್ರಾಮಿಸ್ ಮಾಡಿ' ಅಂದ್ರು. ನಾನು ಅವತ್ತು ಅವರಿಗೆ ಪ್ರಾಮಿಸ್ ಮಾಡಿ ಇಂದಿನವರೆಗೆ ಸಿಗರೇಟು ಸೇದಿಲ್ಲ. ಹಾಗಿತ್ತು ನಮ್ಮ ಬಾಂಧವ್ಯ.

## ರಾಜ್-ವರದಪ್ಪ ರಾಮ-ಲಕ್ಷ್ಮಣರಂತೆ

ಎಸ್.ಪಿ. ವರದರಾಜು ಅವರು ಬಹಳ ಬುದ್ಧಿವಂತರು. ರಾಜ್ ಮತ್ತು ವರದಪ್ಪ ಅವರದ್ದು ರಾಮಲಕ್ಷ್ಮಣನಂಥ ಜೋಡಿ. ಆಗಷ್ಟೇ ಚಿತ್ರರಂಗಕ್ಕೆ ಬಂದಿದ್ದ ರಾಜ್ ಅವರು 'ಸತ್ಯಹರಿಶ್ಚಂದ್ರ' ಸಿನಿಮಾಕ್ಕೂ ಮುನ್ನ ಪೌರಾಣಿಕ ಸಿನಿಮಾವೊಂದರಲ್ಲಿ ಸಹ ನಟರಾಗಿ ಪಾತ್ರ ಮಾಡಿದ್ದರು. ಅವರದ್ದು ಅಷ್ಟ ದಿಕ್ಪಾಲಕರಲ್ಲಿ ಒಬ್ಬನ ಪಾತ್ರ. ಆಗಿನ ಕಾಲದಲ್ಲಿ ಸಿನಿಮಾದಲ್ಲಿ ನಟಿಸುವುದು ದೊಡ್ಡ ವಿಷಯ. ಸಿನಿಮಾ ರಿಲೀಸ್ ಆದ ದಿನ ರಾಜ್ ಅವರು ತಮ್ಮ ಮನೆಮಂದಿಯನ್ನೆಲ್ಲಾ ಕರಕೊಂಡು ಸಿನಿಮಾ ಮಂದಿರಕ್ಕೆ ಹೋಗಿದ್ದರು. ತಮ್ಮ ಪಾತ್ರ ಆಗ ಬರುತ್ತೆ, ಈಗ ಬರುತ್ತೆ ಅಂತ ಕಾದಿದ್ದೇ ಬಂತು, ಪಾತ್ರ ಬರಲಿಲ್ಲ. ಇನ್ನೇನು ಸಿನಿಮಾ ಮುಗಿಯಬೇಕು ಅನ್ನುವಷ್ಟರಲ್ಲಿ ರಾಜ್ ಅವರ ಪಾತ್ರ ಕೆಲವು ಸೆಕೆಂಡುಗಳ ಕಾಲ ತೆರೆಯ ಮೇಲೆ ಬಂತು. ಅದನ್ನು ನೋಡಿ ರಾಜ್ ಅವರಿಗೆ ನೋವು ತಡೆಯಲಾಗಲಿಲ್ಲ.

ಆಗ ಪಕ್ಕದಲ್ಲಿದ್ದ ವರದಪ್ಪ ಅವರು ತಮ್ಮ ಅಣ್ಣ ರಾಜ್ ಅವರ ಕಣ್ಣೀರು ಒರೆಸಿ, 'ಅಣ್ಣಾ ನೀನು ಒಳ್ಳೆಯ ಕಲಾವಿದ. ನಿನಗೆ ಖಂಡಿತಾ ಒಳ್ಳೆಯ ಕಾಲ ಬಂದೇ ಬರುತ್ತದೆ' ಎಂದು ಸಮಾಧಾನ ಮಾಡಿದರಂತೆ. ರಾಜ್ ಅವರು ಅಂದೇ ತಾನು ಚಿತ್ರರಂಗದಲ್ಲಿ ಒಳ್ಳೆಯ ಪಾತ್ರ ಮಾಡಿ, ಹೆಸರು ಗಳಿಸಬೇಕೆಂದು ಸಂಕಲ್ಪ ಮಾಡಿದರು. ಅದೇ ರೀತಿ ದೇವರ ಕೃಪೆ ಆಗಿ ಮುಂದೆ ಇತಿಹಾಸವೇ ನಿರ್ಮಾಣವಾಯಿತು ಎಂದು ನೆನಪಿನ ಬುತ್ತಿ ಬಿಚ್ಚಿಟ್ಟರು ನಾಗೇಶ್.

ವರದಪ್ಪ ಅವರು ವೃತ್ತಿರಂಗಭೂಮಿಯಲ್ಲಿ ಒಳ್ಳೆಯ ಹಾಸ್ಯನಟರಾಗಿ ಪ್ರಸಿದ್ಧಿಯಾಗಿದ್ದರು. ಆದರೆ, ರಾಜ್ ಅವರಿಗೆ ಚಿತ್ರರಂಗದ ಒಳಹೊರಗು ಅಷ್ಟಾಗಿ ಗೊತ್ತಿರಲಿಲ್ಲ. ಹಾಗಾಗಿ, ವರದಪ್ಪ ನಟನೆ ಬಿಟ್ಟು ರಾಜ್ ಅವರ ಸಿನಿಮಾ ಜೀವನ ರೂಪಿಸುವತ್ತ ಗಮನ ಹರಿಸಿದರು. ರಾಜ್ ಅವರ ಸಿನಿಮಾಗಳಿಗೆ ಚಿತ್ರಕತೆ ಆಯ್ಕೆ ಮಾಡುತ್ತಿದ್ದವರೇ ವರದಪ್ಪ. ರಾಜ್ ಕೂಡಾ ಅಷ್ಟೇ, ವರದಪ್ಪ ಹಾಕಿದ ಗೆರೆಯನ್ನು ದಾಟುತ್ತಿರಲಿಲ್ಲ. ಅಷ್ಟೊಂದು ಪ್ರೀತಿ ಅವರಿಗೆ ವರದಪ್ಪ ಅವರ ಮೇಲೆ.

ರಾಜ್ ಅವರಿಗೆ ವರದಪ್ಪ ಅವರ ಮೇಲೆ ಎಷ್ಟೊಂದು ಪ್ರೀತಿ ಇತ್ತು ಎಂದರೆ, ವರದಪ್ಪ ತೀರಿಹೋದ ಆಘಾತ ತಡೆಯದೇ ಎರಡೇ ತಿಂಗಳಿಗೆ ರಾಜ್ ಕೂಡ ಕಣ್ಮುಚ್ಚಿದರು. ಇಬ್ಬರೂ ಬುಧವಾರದಂದೇ ತೀರಿಹೋದರು. ನನ್ನ ಹಾಗೂ ವರದಪ್ಪ ಅವರ ಸ್ನೇಹ 40 ವರ್ಷಗಳಷ್ಟು ಹಳೆಯದು. ಅವರ ಹೆಸರಿನಲ್ಲಿ ಪ್ರಶಸ್ತಿ ಸ್ವೀಕರಿಸಿದ್ದು ನನ್ನ ಭಾಗ್ಯ ಎನ್ನುತ್ತಾರೆ ಅವರು.

## ಹೆಸರಿನೊಂದಿಗೆ ಬೆಂಗಳೂರು!

ಆಗ ಕನ್ನಡ ಸಿನಿಮಾಗಳ ಚಿತ್ರೀಕರಣ, ಧ್ವನಿಮುದ್ರಣ ಇತ್ಯಾದಿಗಳೆಲ್ಲಾ ನಡೆಯುತ್ತಿದ್ದದು ಮದ್ರಾಸಿನಲ್ಲೇ. ಅಲ್ಲಿ ಆಗಲೇ ತಾಯ್ ನಾಗೇಶ್ ಜನಪ್ರಿಯ ನಟರಾಗಿ ರೂಪುಗೊಂಡಿದ್ದರು. ಕನ್ನಡದ ನಾಗೇಶ್ ಅವರೂ ಅಲ್ಲಿಗೆ ಹೋದಾಗ ಸಹಜವಾಗಿ ಇಬ್ಬರು ನಾಗೇಶ್ ಇದ್ದದ್ದು ಗೊಂದಲವಾಗುತ್ತಿತ್ತು.

'ಅವರು ತಾಯ್ ನಾಗೇಶ್ ಆದರೆ, ನೀವು ತಂದೆ ನಾಗೇಶ್ ಅಂತ ಹೆಸರಿಟ್ಟುಕೊಳ್ಳಿ ಎಂಬ ಸಲಹೆ ಹಲವರಿಂದ ಬಂತು. ಮತ್ತಷ್ಟು ಮಂದಿ ತಮಗೆ ತೋಚಿದ್ದನ್ನು ಹೇಳಿ, ಇದನ್ನೇ ಇಟ್ಟುಕೊಳ್ಳಿ ಅಂತ ಹೇಳತೊಡಗಿದರು. ಇದನ್ನೆಲ್ಲ ಗಮನಿಸಿದ ರಾಜ್‌ಕುಮಾರ್ ಅವರು, 'ಅವರನ್ನು ಯಾಕೆ ಗೋಳು ಹೊಯ್ದುಕೊಳ್ಳುತ್ತೀರಿ. ಅವರು ಬೆಂಗಳೂರಿನವರು. ಹಾಗಾಗಿ, ಅವರನ್ನು ಬೆಂಗಳೂರು ನಾಗೇಶ್ ಅಂತ ಕರೆಯಬಹುದಲ್ಲ' ಅಂದರು. ರಾಜ್ ಅವರಿಂದಾಗಿ ಬೆಂಗಳೂರು ನಾಗೇಶ್ ಎಂದೇ ಪ್ರಸಿದ್ಧರಾದರು.

ಇದುವರೆಗೆ 200 ಸಿನಿಮಾಗಳು, ನೂರಾರು ಧಾರಾವಾಹಿಗಳಲ್ಲಿ ಅಭಿನಯಿಸಿರುವ ನಾಗೇಶ್ ಅವರಿಗೆ ಮತ್ತಷ್ಟು ಸಿನಿಮಾಗಳಲ್ಲಿ ನಟಿಸುವ ಹಂಬಲ. ಉದಯವಾಹಿನಿಯ 'ನಯನತಾರಾ', ಕಲರ್ಸ್ ಕನ್ನಡದ 'ಕಮಲಿ'ಯಲ್ಲಿ ತಾತನ ಪಾತ್ರ ಅವರಿಗೆ ಜನಪ್ರಿಯತೆ ತಂದುಕೊಟ್ಟಿವೆ.

ಕೆಂಪೇಗೌಡ ಪ್ರಶಸ್ತಿ, ಕಿಚ್ಚ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದಿರುವ ಬೆಂಗಳೂರು ನಾಗೇಶ್ ಅವರಿಗೆ ಇತ್ತೀಚೆಗಷ್ಟೆ ವರದರಾಜು ಪ್ರಶಸ್ತಿ ಸಂದಿದೆ. 'ಜನರು ತಮ್ಮನ್ನು ನೋಡಿ ಗುರುತಿಸುತ್ತಾರೆ. ಅಷ್ಟು ಸಾಕು. ದೇವರು ಇಟ್ಟಂತೆ ಇದ್ದೀನಿ. ಪತ್ನಿ ಸುಮಾ, ಮಗಳು–ಅಳಿಯ ಮತ್ತು ಮೊಮ್ಮಕ್ಕಳೊಂದಿಗೆ ಆರಾಮವಾಗಿದ್ದೀನಿ, ಅಷ್ಟು ಸಾಕು ನನಗೆ' ಎನ್ನುವ ಅವರ ಮಾತಿನಲ್ಲಿ ತುಂಬು ಬಾಳಿನ ಪ್ರಸನ್ನತೆ ಕಾಣಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in